### ಮರೆಯಲಾಗದ ವರ್ಷ

'ಟ್ವೆಂಟಿ–20: ಮರೆಯಬೇಕಾದ, ಮರೆಯಲಾಗದ ವರ್ಷ' ಲೇಖನ (ಡಿ. 31) ಓದಿದೆ. 2020 ಮರೆಯಲಾಗದ ಕಹಿ ನೆನಪಿನಿಂದ ಕೂಡಿದ ವರ್ಷವೇ ಆಯಿತು. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಎಲ್ಲರಿಗೂ ಒಂದಿಲ್ಲೊಂದು ರೀತಿಯ ತೊಂದರೆ ಈ ಕೊರೊನಾದಿಂದ ಉಂಟಾಗಿದೆ. ಮುಖಪುಟ ಲೇಖನ ಈ ಸಂಕಷ್ಟದ ಸಮಗ್ರ ಚಿತ್ರಣವನ್ನು ಮಾಡಿಕೊಟ್ಟಿದೆ.

–ಕೆ. ಎಸ್. ಸವಿತ, ಬೆಂಗಳೂರು

ವರ್ಷದ ಕೊನೆಯ ಸಂಚಿಕೆಯಲ್ಲಿ ಪ್ರಕಟವಾದ ಕೊರೊನಾ ಕಾಲದ ಇಪ್ಪತ್ತು ಅಂಶಗಳ ಕಥನಗಳು ಒಂದೊಂದೂ ಹಲವು ನೆನಪುಗಳನ್ನು ತರಿಸಿದವು. ಇನ್ನು ಮುಂದಿನ ದಿನಗಳಲ್ಲಾದರೂ ಸಂಕಷ್ಟ ಕಳೆದು ಸಮಾಧಾನ ಮೂಡಲಿ.

–ಸುಬ್ಬಲಕ್ಷ್ಮಿ ಕೋಲಾರ, ಲಕ್ಷ್ಮಣ್ ರಾವ್ ಎಂ. ಎಲ್. ದಾವಣಗೆರೆ, ಕೆ. ಹೊನ್ನಪ್ಪ ತುಮಕೂರು

### ಹಾರುಹಕ್ಕಿಯ ಲೀಲೆ!

ಡಿ. 30ರ ಸಂಚಿಕೆಯಲ್ಲಿ ಕಲೀಮ್ ಉಲ್ಲಾ ಅವರ ಚಿತ್ರಲೇಖನ 'ಕಡಲಲೆಯ ಮೇಲೆ ಹಾರುಹಕ್ಕಿಯ ಲೀಲೆ' ಓದಿದೆ. ನಗರದ ಟ್ರಾಫಿಕ್ ಜಾಮ್ ಅಷ್ಟೇ ನೋಡಿ(ಬೇ)ಸತ್ತವರಿಗೆ, ಸಾಕಷ್ಟು ಮಾಹಿತಿಯೊಂದಿಗೆ, ನೀಲಾಕಾಶ, ಮ್ಯಾಂಗ್ರೋವ್ ಹಿನ್ನೆಲೆಯೊಂದಿಗೆ ಹಾರುವ ಕಡಲ ಹಕ್ಕಿಗಳ ಮನಮೋಹಕ ದೃಶ್ಯಕಾವ್ಯ ಒದಗಿಸಿದ ಲೇಖಕರಿಗೆ ಧನ್ಯವಾದ.

–ರಾಮಚಂದ್ರ ಜಿ.ಎಸ್., ಮಹದೇವಸ್ವಾಮಿ, ತುಮಕೂರು

ಕಡಲು ಹಕ್ಕಿಗಳ ಸ್ಥಿರ ಚಿತ್ರೀಕರಣದ (Pelagic Birding) ಅನುಭವವನ್ನು ಸರಳವಾದರೂ ಸೊಗಸಾದ ರೀತಿಯಲ್ಲಿ ಹಂಚಿಕೊಂಡಿರುವ ಕಲೀಮ್ ಉಲ್ಲಾ ಅವರಿಗೆ ಹೃತ್ಪೂರ್ವಕ ಧನ್ಯವಾದ. ಗೋವಾದ ಬಳಿ pelagic birdingನಲ್ಲಿ ಒಮ್ಮೆ ಭಾಗಿಯಾಗಿದ್ದ ನನಗೆ, ಪ್ರಬಂಧ ಓದುತ್ತಿದ್ದಂತೆಯೇ ನನ್ನ ಸ್ವಂತ ಅನುಭವ ಮನಃಪಟಲದ ಮೇಲೆ ಹಾದು ಹೋಯಿತು.

–ಶ್ರೀನಿವಾಸ ಎಸ್.ಕೆ., ಬೆಂಗಳೂರು

ನಮ್ಮ ಸುತ್ತಮುತ್ತ ನಡೆಯುವ ಪ್ರಕೃತಿಯ ನೋಟ ನೋಡುವ ಭಾಗ್ಯ ನಮಗೆ ಸಿಗದಿದ್ದರೂ, ಲೇಖನ ಅದನ್ನು ಸಚಿತ್ರವಾಗಿ ಕಟ್ಟಿಕೊಟ್ಟಿದೆ. ಲೇಖನ ಓದುತ್ತಿದ್ದರೆ ನಾವೇ ಅಲ್ಲೆಲ್ಲ ಓಡಾಡಿ ಬಂದೇವೇನೋ ಎಂಬತ್ತಿತ್ತು. ಕಲೀಮ್ ಉಲ್ಲಾ ಅವರ ಬರವಣಿಗೆ ಬಹಳ ಸೊಗಸಾಗಿದೆ.

–ಶ್ಯಾಮಲಾ ಎಚ್.ಎನ್.

### ಸುಮಿನಿ ಹೋರಾಟ

ಡಿ. 31ರ ಸಂಚಿಕೆಯ ಸೆಲೆಬ್ರಿಟಿ ಪುಟದಲ್ಲಿ ಪ್ರವೀಣ್ ಕುಲಕರ್ಣಿ ಅವರು ಬರೆದ 'ಸುಮ್ಮನೆ ಅಲ್ಲ ಸುಮಿನಿ ಹೋರಾಟ' ಲೇಖನ ಓದಿದೆ. ನಲವತ್ತೈದು ವಯಸ್ಸಿನ, ಐದು ಮಕ್ಕಳ ತಾಯಿ ತುಂಬು ಸಂಸಾರದ ಜವಾಬ್ದಾರಿ ನಿಭಾಯಿಸುವುದರ ಜೊತೆಗೆ, ಊರಿನ ವನಿತೆಯರ ಪಡೆ ಕಟ್ಟಿಕೊಂಡು ಎದೆಗುಂದದೇ ಪರಿಸರ ರಕ್ಷಣೆಗೆ ಹೋರಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ.

–ಅರವಿಂದ ಜಿ. ಜೋಷಿ, ಮೈಸೂರು

### ಭಾವೇಶ್ ಭಾಟಿಯ

ನೇಮಿಚಂದ್ರ ಅವರ ಧಾರಾವಾಹಿ 'ಬದುಕು ಬದಲಿಸಿದ ಭಾವೇಶ್ ಭಾಟಿಯ' ತುಂಬ ಚೆನ್ನಾಗಿ ಮೂಡಿಬರುತ್ತಿದೆ. ನಮ್ಮ ಬುದ್ಧಿ ಮನಸ್ಸನ್ನು ಆವರಿಸಿದೆ. ಅಂಗವೈಫಲ್ಯವನ್ನು ಮೆಟ್ಟಿನಿಂತು ಅವರ ಬದುಕನ್ನು ಬದಲಿಸಿಕೊಳ್ಳುವ ಪರಿ ಅನನ್ಯ. ನೇಮಿಚಂದ್ರ ಅವರ ವಿದ್ವತ್ಪೂರ್ಣ ವಿವರಣೆಯಿಂದಾಗಿ ಇಡೀ ಕಥನ ನಮ್ಮ ಕಣ್ಣಮುಂದೆಯೇ ನಡೆಯುತ್ತಿರುವಂತೆ ಭಾಸವಾಗುತ್ತದೆ. ಇಂಥ ಒಂದು ವಿಶೇಷ ಅನುಭವಕ್ಕೆ ಕಾರಣರಾದ ಲೇಖಕಿಗೆ ಹಾಗೂ 'ಸುಧಾ' ಪತ್ರಿಕೆಗೆ ನಾವು ಅಭಾರಿಯಾಗಿದ್ದೇವೆ.

–ಭಾರತಿ ಸುಧೀಂದ್ರ, ಬೆಂಗಳೂರು

### ಸೊಗಸಾದ ಕಥೆ

ಡಿ. 30ರ ಸಂಚಿಕೆಯಲ್ಲಿ ಡಾ. ಪ್ರೇಮಲತ ಬಿ. ಅವರ ಕಥೆ 'ಈಶ್ವರಿ' ಬಹಳ ಚೆನ್ನಾಗಿ ಓದಿಸಿಕೊಂಡು ಹೋಯಿತು. ಹೆತ್ತಕರುಳ ಸಂಕಟ, ತನ್ನ ಕಂದ ಹೇಗಿದ್ದರೂ ಚೆಂದವೇ ಎಂಬ ದಿಟ್ಟ ನಿರ್ಧಾರ ಎಲ್ಲವೂ ವಾಸ್ತವವೇನೋ ಎಂಬಂತಿತ್ತು. ಒಕ್ಕಣೆಗಳು, ಭಾಷಾ ಬಳಕೆಯಲ್ಲಿ ಹೊಸತನವೂ ಕಂಡಂತಾಯಿತು. ಆದರೆ ಕೊನೆಗಾಣುವಲ್ಲಿ ನಿರಾಸೆ ಮೂಡಿಸಿತು. ದುರಂತವೋ, ಸುಖಾಂತ್ಯವೋ ಏನಾದರೊಂದು ವಾಸ್ತವ ನಡೆದು ಕೊನೆಗಾಣಿಸಬೇಕಿತ್ತು.

–ಮಹಮ್ಮದ್ ಬೇದ್ರ

ಕಥೆ ಚೆನ್ನಾಗಿ ಮೂಡಿಬಂದಿದೆ. ಕಥಾನಾಯಕಿಗೆ ಕೊನೆಯಲ್ಲಿ ಸೂರ್ಯನೊಂದಿಗೆ ಎರಡನೇ ಮದುವೆ ಮಾಡಿಸಿದ್ದರೆ ಚೆನ್ನಾಗಿರುತ್ತಿತ್ತು. ಸೀಳುತುಟಿಯ ಈಶ್ವರಿಗೆ ಅವಳ ಭಾವನೆಗಳಿಂದಲೇ ತೃಪ್ತಿಪಡುವಂತಾಗಿದ್ದು ಅನ್ಯಾಯವೇ ಸರಿ!

–ವಿ.ಎಸ್. ಪದ್ಮನಾಭಾಚಾರ್

### ಸುಂದರ ಸಂಚಿಕೆ

ಡಿ. 24ರ 'ಸುಧಾ' ಬಹಳ ಇಷ್ಟವಾಯ್ತು. ಅಮೃತಮತಿ ಅವರ 'ಸಿರಿಯೆಂಬ ಐಸಿರಿ', ಎಚ್.ಕೆ. ಶರತ್ ಅವರ 'ಲಿಂಗ ತಾರತಮ್ಯ' ಮತ್ತು ಕಡೆಯ ಪುಟದ 'ಸುಮಿನಿ ಹೋರಾಟ' ಎಂಬ ಹ್ಯಾಟ್ರಿಕ್ ಲೇಖನಗಳು ಬಹಳ ಬಹಳ ಹಿಡಿಸಿದವು.

–ಕೆ.ಎ. ಸೌಮ್ಯ, ಮೈಸೂರು

### ಉತ್ತಮ ಲೇಖನ

ಡಿ. 24ರ ಸಂಚಿಕೆಯಲ್ಲಿ ರಾಘವೇಂದ್ರ ಕೆ. ತೊಗರ್ಸಿ ಬರೆದ ಶಿಕ್ಷಣ ಕುರಿತಾದ ಲೇಖನ ಅರ್ಥಪೂರ್ಣವಾಗಿದೆ.

–ಎನ್. ವೈದೇಹಿ, ಮೈಸೂರು

### ಚಂದ್ರ ಸ್ಪರ್ಧೆ

ಡಿ. 24ರ ಸಂಚಿಕೆಯಲ್ಲಿ ಡಾ. ಬಿ.ಆರ್. ಗುರುಪ್ರಸಾದ್ ಅವರು ಬರೆದ 'ಚಂದ್ರ ಸ್ಪರ್ಧೆ' ಹಾಗೂ ಹಾಲ್ದೊಡ್ಡೇರಿ ಸುಧೀಂದ್ರ ಅವರ 'ವ್ಯಾಕ್ಸೀನ್: ಫಲಿಸೀತೇ ಪ್ರಾರ್ಥನೆ?' ಎರಡೂ ಲೇಖನಗಳು ಉತ್ತಮ ಮಾಹಿತಿಗಳಿಂದ ಕೂಡಿದ್ದು, ಬಹಳ ಆಸಕ್ತಿಕರವಾಗಿಯೂ ಇವೆ.

–ಬೃಂದಾ ಎನ್. ರಾವ್ ಪತ್ತಂಗಿ ಎಸ್. ಮುರಳಿ, ಬೆಂಗಳೂರು


## ಈ ಹೊತ್ತಿಗೆ ಕಥಾಸ್ಪರ್ಧೆ

2020–21ರ ಸಾಲಿನ 'ಈ ಹೊತ್ತಿಗೆ ಕಥಾ ಪ್ರಶಸ್ತಿ'ಗಾಗಿ ಕನ್ನಡದ ಅಪ್ರಕಟಿತ ಕಥಾ ಸಂಕಲನಗಳನ್ನು ಆಹ್ವಾನಿಸುತ್ತಿದೆ. ಮತ್ತು 26 ವರ್ಷದ ಒಳಗಿನವರಿಗಾಗಿ ಕಥಾಸ್ಪರ್ಧೆಯನ್ನೂ ಆಯೋಜಿಸಿದೆ. ಕಥೆಗಳು ಸ್ವತಂತ್ರವಾಗಿರಬೇಕು. 9ರಿಂದ ಹತ್ತು ಕಥೆಗಳುಳ್ಳ ಕಥಾಸಂಕಲನದ 3 ಪ್ರತಿಗಳನ್ನು ಡಿಟಿಪಿ ಮಾಡಿ ಕಳಿಸಿಕೊಡಬೇಕು. ಆಯ್ಕೆಯಾದ ಸಂಕಲನಕ್ಕೆ ₹ 10,000 ನಗದು ಮತ್ತು ಪ್ರಶಸ್ತಿ ಫಲಕ ಕೊಡಲಾಗುವುದು. ಕಥಾಸ್ಪರ್ಧೆಗೆ ಪದಮಿತಿ 2000 ಶಬ್ದಗಳು. ಅಪ್ರಕಟಿತ ಕಥೆಯಾಗಿರಬೇಕು. ಇ– ಮೇಲ್‌ನಲ್ಲಿ ಕಳಿಸುವವರು ಯೂನಿಕೋಡ್ ತಂತ್ರಾಂಶವನ್ನು ಬಳಸಬೇಕು. ಮೇಲ್ ವಿಳಾಸ: ehottige.ks@gmail.com ಮೊದಲ ಬಹುಮಾನ ₹ 5000 ಎರಡನೇ ಬಹುಮಾನ ₹ 3000 ಮೂರನೇ ಬಹುಮಾನ ₹ 2000.

ಕೊನೆಯ ದಿನಾಂಕ: ಜನವರಿ 29 ವಿಳಾಸ: ಈ ಹೊತ್ತಿಗೆ, #65, ಮುಗುಳ್ನಗೆ, 3ನೇ ಅಡ್ಡರಸ್ತೆ, ಪಿ.ಎನ್.ಬಿ. ನಗರ, ಕೋಣನಕುಂಟೆ, ಬೆಂಗಳೂರು – 560062


**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in